813 ಶ್ರೀ ಬಾಲರಾಜ್ ಎಸ್ : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದಿಂದ ಮೈಸೂರಿಗೆ ಹೋಗುವ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ 212 ಎಂದು ಘೋಷಿಸಿ ಐದಾರು ವರ್ಷಗಳು ಕಳೆದರೂ ರಸ್ತೆ ಅಭಿವೃದ್ಧಿ ಕುರಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಕೊಳ್ಳೇಗಾಲ, ಶ್ರೀ ಮಹದೇಶ್ವರ ಬೆಟ್ಟ ಹಾಗೂ ಬಿಳಿಗಿರಿರಂಗನಬೆಟ್ಟಕ್ಕೆ ಯಾತ್ರಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ವಾಹನಗಳವರು ಮೈಸೂರಿನಿಂದ ಆಗಮಿಸುವಾಗ ತುಂಬಾ ತೊಂದರೆ ಅನುಭವಿಸುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ,

ಇ) ಹಾಗಿದ್ದಲ್ಲಿ, ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) .

ಅ) ಬಂದಿದೆ 1999ನೇ ಇಸವಿಯಲ್ಲಿ ಈ ರಸ್ತೆಯನ್ನು ರಾಜ್ಯ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿಗೆ ಉನ್ನತೀಕರಿಸಲಾಗಿದೆ ಆದರೆ ರಾಷ್ಟ್ರೀಯ ಹೆದ್ದಾರಿಗೆ ಅಗತ್ಯವಾದ ಗಟ್ಟಿ ತಳಪಾಯ (crust thickness) ಇಲ್ಲದೆ ಇರುವುದರಿಂದ ಹಂತ ಹಂತವಾಗಿ ಮತ್ತು ಅನುದಾನದ ಲಭ್ಯತೆಗನುಸಾರವಾಗಿ ತಳಪಾಯವನ್ನು ಗಟ್ಟಿಗೊಳಿಸುವ ಕಾಮಗಾರಿ, ಅಗಲೀಕರಣ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ

ಆ) ಸರ್ಕಾರದ ಗಮನಕ್ಕೆ ಬಂದಿದೆ

ಇ) ಮೈಸೂರಿನಿಂದ ಟಿ ನರಸೀಪುರ ಮಾರ್ಗವಾಗಿ ಕೊಳ್ಳೇಗಾಲದ ವರೆಗಿನ ರಾಷ್ಟ್ರೀಯ ಹೆದ್ದಾರಿ 212 ರ ಅಭಿವೃದ್ಧಿಗೆ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ,

ಅನುಬಂಧ

ಕ್ರ. ಸಂ	ಕಾಮಗಾರಿ ಹೆಸರು	ಅಂದಾಜು ಮೊತ್ತ (ಲಕ್ಷ ರೂ ಗಳಲ್ಲಿ)	ಷರಾ
1	ಕಿಮೀ 201 ರಿಂದ 215 ರವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗಳು (ರಸ್ತೆಯ ಅಗಲೀಕರಣ, ಗ್ಯಾಂಟ್ರಿ ಬೋರ್ಡ್ ಮತ್ತು ಇತರೆ ಕಾಮಗಾರಿಗಳು) ರಾ ಹೆ 212	199 06	ಕಾಮಗಾರಿಯು ಪೂರ್ಣಗೊಂಡಿರುತ್ತದೆ

2	ಕಿಮೀ 215 ರಿಂದ 228 ರವರೆಗೆ ತಳಪಾಯ ಭದ್ರಪಡಿಸುವುದು ಮತ್ತು ರಸ್ತೆಯ ಅಗಲೀಕರಣ ರಸ್ತೆ ಕಾಮಗಾರಿ ರಾ ಹೆ –212	1426 58	ಅಂದಾಜು ಪಟ್ಟಿಯನ್ನು ತಯಾರಿಸಿ ಕೇಂದ್ರ ಭೂಸಾರಿಗೆ ಮಂತ್ರಾಲಯ ನವದೆಹಲಿಗೆ ಮಂಜೂರಾತಿಗಾಗಿ ದಿನಾಂಕ 14 11 2006 ರಂದು ಸಲ್ಲಿಸಲಾಗಿರುತ್ತದೆ
3	ಕಿಮೀ 241 ರಿಂದ 249 ರವರೆಗೆ ರಸ್ತೆಯ ಅಗಲೀಕರಣ ಹಾಗೂ ಅಬಿವೃದ್ಧಿ ಕಾಮಗಾರಿ ರಾ ಹೆ–212	343 57	ಮೆ ದುರ್ಗಾ ಕನ್ಸ್‌ಟ್ರಕ್ಷನ್ಸ್, ಕುಂಭಕೋಣಂ ಇವರಿಗೆ ಟೆಂಡರ್ ಆಧಾರದ ಮೇಲೆ 2005–06 ರಲ್ಲಿ ವಹಿಸಿದ್ದು ಮೂಲ ಗುತ್ತಿಗೆದಾರರು ನಿಗದಿತ ಪ್ರಗತಿ ಸಾಧಿಸದೆ ಇರುವುದರಿಂದ ಕರಾರನ್ನು ರದ್ದುಪಡಿಸಿ ಉಳಿಕೆ ಕಾಮಗಾರಿಗೆ ಪುನಃ ಟೆಂಡರನ್ನು ಕರೆಯಲಾಗಿದೆ ಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು
4	ಕಿಮೀ 249 ರಿಂದ 257 60 ರವರೆಗೆ ರಸ್ತೆಯ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿ ರಾ ಹೆ –212	398 40	

ಕ್ರ ಸಂ	ಪಟ್ಟಣದ ಹೆಸರು	ಕಿಮೀ ಸರಪಳಿ
1	ಮೈಸೂರು	209 00
2	ಟಿ ನರಸೀಪುರ	241 00
3	ಉತ್ತಂಬಳ್ಳಿ ಜಂಕ್ಷನ್ (ಕೊಳ್ಳೇಗಾಲ ಸಮೀಪ)	286 60

643 ಶ್ರೀ ಕೃಷ್ಣ ಪಾಲೇಮಾರ್ ಜೆ : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಕಿಮೀ ಉದ್ದದ ಚತುಷ್ಪಥ ರಸ್ತೆಯನ್ನು ನಿರ್ಮಿಸಲು ಕೇಂದ್ರ ಸರ್ಕಾರವು ಅನುಮತಿಸಿದೆ,

ಆ) ಈ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಲು ಸರ್ಕಾರ ರೂಪಿಸಿದ ಕ್ರಿಯಾ ಯೋಜನೆ ಎಷ್ಟು ಹಾಗೂ ಅವುಗಳಿಗೆ ಎಷ್ಟು ಮೊತ್ತದ ಹಣವನ್ನು ನಿಗದಿಪಡಿಸಲಾಗಿದೆ,